## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 201(256) |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 12-08-2025 |

*****

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಉತ್ತರ ಕರ್ನಾಟಕದ ಬಾಗಲಕೋಟೆ ಜಿಲ್ಲೆ ಜವಳಿ ಕೈಗಾರಿಕೆಗಳೂ, ನೂಲಿನ ಗಿರಣಿಗಳು ಹಾಗೂ ಬಟ್ಟೆ ಕೈಗಾರಿಕೆ ಕೇಂದ್ರವಾಗಿದ್ದು ನಾಲ್ಕು ದಶಕಗಳಿಂದ ಬಡ ನೇಕಾರರ ಉದ್ಯೋಗಕ್ಕೆ ಸಂಜೀವಿನಿಯಾಗಿದ್ದ ಕರ್ನಾಟಕ ಕೈಮಗ್ಗ ಅಭಿವೃದ್ಧಿ (ಕೆ.ಹೆಚ್.ಡಿ.ಸಿ.) ನಿಗಮದಿಂದ ಈಗ ನೇಕಾರರಿಗೆ ಯಾವುದೇ ಸಹಾಯ ಸಿಗದ ಕಾರಣ ನೇಕಾರರು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಕರ್ನಾಟಕ ಕೈಮಗ್ಗ ಅಭಿವೃದ್ಧಿ (ಕೆ.ಹೆಚ್.ಡಿ.ಸಿ.) ನಿಗಮದಡಿಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ನೊಂದಾಯಿತ ನೇಕಾರರಿಗೆ ನಿರಂತರ ಕಚ್ಚಾ ಮಾಲು ಪೂರೈಸಿ ಅವರು ಉತ್ಪಾದಿಸಿದ ಬಟ್ಟೆಗಳನ್ನು ಸ್ವೀಕರಿಸಿ ಪರಿವರ್ತನಾ ಶುಲ್ಕ ಪಾವತಿಸುವುದರ ಮೂಲಕ ಅವರ ಜೀವನ ನಿರ್ವಹಣೆಗೆ ಅನುಕೂಲ ಮಾಡಿಕೊಡಲಾಗುತ್ತಿದೆ. ಪ್ರಸ್ತುತ 2024-25ನೇ ಸಾಲಿನಲ್ಲಿ ನೇಕಾರರಿಗೆ ವಿತರಿಸಿದ ಕಚ್ಚಾ ಮಾಲು, ನೇಕಾರರಿಂದ ಸ್ವೀಕರಿಸಿದ ಬಟ್ಟೆ ಪ್ರಮಾಣ ಹಾಗೂ ಪರಿವರ್ತನಾ ಶುಲ್ಕ ಪಾವತಿಸಿದ ವಿವರಗಳು ಈ ಕೆಳಗಿನಂತಿವೆ.
<table>
<tr><th>ಕ್ರಸಂ.</th><th>ವಿತರಿಸಿದ ಕಚ್ಚಾ ಮಾಲು</th><th>ನೇಕಾರರಿಂದ ಸ್ವೀಕರಿಸಿದ ಬಟ್ಟೆ ಪ್ರಮಾಣ</th><th>ನೇಕಾರರಿಗೆ ಪಾವತಿಸಿದ ಪರಿವರ್ತನಾ ಶುಲ್ಕ</th></tr>
<tr><td>1</td><td>2.69 ಲಕ್ಷ ಕೆ.ಜಿ.</td><td>18.83 ಲಕ್ಷ ಮೀಟರ್</td><td>ರೂ.6.18 ಕೋಟಿ</td></tr>
</table></td></tr>
<tr><td>(ಆ)</td><td>ಬಾಗಲಕೋಟೆ ಜಿಲ್ಲೆಯೊಂದರಲ್ಲಿಯೇ ಬನಹಟ್ಟಿ, ರಬಕವಿ ಹಾಗೂ ಇಳಕಲ್ ನಗರದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ (ಕೆ.ಹೆಚ್.ಡಿ.ಸಿ.) ನಿಗಮದ ಶಾಖಾ ಕಚೇರಿಗಳು ಇದ್ದು, ಈ ಕಚೇರಿಗಳಲ್ಲಿ ಯೋಜನಾ ಅಧಿಕಾರಿ ಸೇರಿದಂತೆ ಕೆಳಹಂತದ ಅಧಿಕಾರಿಯವರೆಗೆ ಯಾವ ಹುದ್ದೆಯಲ್ಲೂ ಖಾಯಂ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಬಾಗಲಕೋಟೆಯ ಕೆ.ಹೆಚ್.ಡಿ.ಸಿ. ಕಚೇರಿಯಲ್ಲಿ ಪ್ರಭಾರಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದು, ನೇಕಾರರ ಸಮಸ್ಯೆಗಳಿಗೆ ಸ್ಪಂದಿಸಲು ಖಾಯಂ ಅಧಿಕಾರಿಗಳನ್ನು ನೇಮಿಸಲು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಈ ಬಗ್ಗೆ ಸರ್ಕಾರದ ಕ್ರಮಗಳೇನು (ಮಾಹಿತಿ ನೀಡುವುದು)?</td><td>ಕರ್ನಾಟಕ ಕೈಮಗ್ಗ ಅಭಿವೃದ್ಧಿ (ಕೆ.ಹೆಚ್.ಡಿ.ಸಿ.) ನಿಗಮದಲ್ಲಿ ಖಾಯಂ ನೌಕರರ ನಿರಂತರ ವಯೋನಿವೃತ್ತಿ ಕಾರಣ ಸಿಬ್ಬಂದಿಗಳ ಕೊರತೆ ಉಂಟಾಗಿದ್ದು ಲಭ್ಯವಿರುವ ಅಧಿಕಾರಿ/ಸಿಬ್ಬಂದಿಗಳ ಮೂಲಕ ನಿಗಮದ ಶಾಖಾ ಕಛೇರಿಗಳ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ.</td></tr>
</table>

ಸಂಖ್ಯೆ: CI 174 JAKE 2025

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು